# ಮಂಗಳ ಮಾರಮಣಗೆ ಮಂಗಳ

1. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 279.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Prof. S.K. Ramachandra Rao and also in the books of Sri. Pavanje Guru Rao and also in the books of Gorebala Hanumantha Rayaru.
3. Note: Singer has followed these wordings.

ರಾಗ - : ತಾಳ -

ಮಂಗಳ ಮಾರಮಣಗೆ ಮಂಗಳ ಜಯ
ಮಂಗಳ ಭೂರಮಣಗೆ ಮಂಗಳ ll ಪ ll

ಮುಕುಟಕೆ ಮಂಗಳ ಮತ್ಸ್ಯಾವತಾರಗೆ
ಮುಖಕೆ ಮಂಗಳ ಮುದ್ದು ಕೂರ್ಮನಿಗೆ
ಸುಕಂಠಕೆ ಮಂಗಳ ಸೂಕರ ರೂಪಗೆ
ನಖಕೆ ಮಂಗಳ ಮುದ್ದು ನರಸಿಂಹಗೆ ll ೧ ll

ವಕ್ಷಕೆ ಮಂಗಳ ವಟು ವಾಮನನಿಗೆ
ಪಕ್ಷಕೆ ಮಂಗಳ ಭಾರ್ಗವಗೆ
ಕಕ್ಷಕೆ ಮಂಗಳ ಕಾಕುತ್ಸ್ಥ ರಾಮನಿಗೆ
ಕುಕ್ಷಿಗೆ ಮಂಗಳ ಶ್ರೀಕೃಷ್ಣಗೆ ll ೨ ll

ಊರುಗಳಿಗೆ ಮಂಗಳ ಉತ್ತಮ ಬುದ್ಧಗೆ
ಚರಣಕ್ಕೆ ಮಂಗಳ ಚೆಲ್ವ ಕಲ್ಕಿಗೆ
ಪರಿಪರಿ ರೂಪಗೆ ಪರಮ ಮಂಗಳ
ಪುರಂದರ ವಿಠ್ಠಲಗೆ ಶುಭಮಂಗಳ ll ೩ ll

**Classification:** Keerthane

**Ankita:** purandara vittala

**Location:** NA

**Category:** Mangala Song, dashavatara,

**Sub-Category:** mangala, Vishnu, Narayana, dashavatara, Krishna, ooru, shubha,

**Pravachana:** NA

**Explanation:** NA